# ಪ್ರಿಯ ಓದುಗರೆ...



ಪರಮೇಶ್ ಜೋಳದ

ಕತೆಯ ಬೀಜವೊಂದು ಕತೆಗಾರನ ಮನಸ್ಸಿನ ಕನ್ನೆನೆಲದಲ್ಲಿ ಬಿದ್ದು ಗಿಡವಾಗುವ ಕ್ಷಣವನ್ನು ಸರಳವಾಗಿ ವಿವರಿಸಲಾಗುವುದಿಲ್ಲ. ಅದೊಂದು ವಿಶಿಷ್ಟ, ಅಪೂರ್ವ ಗಳಿಗೆಯಾಗಿ ಅವನ ಮನದಲ್ಲಿ ದಾಖಲಾಗಿರುತ್ತದೆ. ಕತೆ ಬರೆದ ಬಳಿಕವಷ್ಟೇ ಅದು ಅರಿವಿಗೆ ಬರುವಂಥದ್ದು. ಇವೆಲ್ಲ ಸಂಗತಿಗಳು, ನೋಟಗಳು ಸೇರಿ ಆಗಿದೆ ಎಂದು ಲೇಖಕ ಅಂದುಕೊಳ್ಳಬಹುದಷ್ಟೆ. ಕತೆಗಾರನಿಗೆ ಕಾಣುವ ಕಣ್ಣು ಇದ್ದರೆ ತನ್ನ ಸುತ್ತಣ ಜಗತ್ತಿನ ಪ್ರತಿಯೊಂದು ಮಾನವೀಯ ಸ್ಪಂದನದಲ್ಲೂ ಕತೆ ಇರುವುದನ್ನು ಗುರುತಿಸಬಲ್ಲ. ಸಂತೆಯ ಸಂದಣಿಯಲ್ಲಿ ಸರಿದು ಹೋದ ಮುದುಕ, ನೀರವ ರಾತ್ರಿಯಲ್ಲಿ ಕೇಳಿದ ಜಗಳ, ಸುರಿವ ಮಳೆಯಲ್ಲಿ ಕೊಡೆ ಹಿಡಿದು ಹೋದ ಹೆಂಗಸು, ಬಣ್ಣಮಾಸಿ ಮುರಿದುಬೀಳಲಿರುವ ಮನೆ, ಅಜ್ಜಿಯ ಕಣ್ಣಂಚಿನಲ್ಲಿ ಕಂಡ ಕಣ್ಣೀರು... ಹೀಗೆ ತನ್ನ ಸಂವೇದನೆಯ ಸೂಕ್ಷ್ಮ ಫಲಕಗಳಿಗೆ ತಾಕಿದ ಅಲೆಗಳಿಗೆ ಕಿವಿಗೊಡುತ್ತಲೇ ಇರುವ ಬರಹಗಾರ ಎಚ್ಚರವಾಗಿದ್ದರೆ ಇದಕ್ಕೂ ಮೀರಿದ್ದು ಸಿಗುತ್ತಲೇ ಇರುತ್ತದೆ. ಅವನು ಗಾಳಕ್ಕೆ ಎರೆ ಸಿಕ್ಕಿಸಿ ಕತೆಯೆಂಬ ಮೀನಿಗೆ ಕಾಯುತ್ತಿರುವ ಬೆಸ್ತನಂತೆ. ಬರಹಗಾರ ಅದೃಷ್ಟವಂತನಾದರೆ ಬೇಗ ಮೀನು ಸಿಕ್ಕುತ್ತದೆ. ಕಸುಬುದಾರನಾದರೆ ಅವನೇ ಮೀನನ್ನು ನದಿಯಿಂದ, ಸಮುದ್ರದಿಂದ ಅದು ಎಲ್ಲಿದೆ ಎಂಬುದರ ಸುಳಿವು ತಿಳಿದು ಹುಡುಕಿ ತೆಗೆಯುತ್ತಾನೆ. ಕತೆ ಬರೆಯುವಾಗ ಇವೆರಡೂ ಬೇಕು. ಒಂದು ಅದೃಷ್ಟ, ಇನ್ನೊಂದು ಕಸುಬುದಾರಿಕೆ. ಹಾಗಾಗಿ ಕತೆ ಬರೆಯುವುದೂ ಕೂಡ ಬೆಸ್ತನ ಕೆಲಸದ ರೀತಿಯೇ. ಇವುಗಳಲ್ಲಿ ಯಾವುದೂ ಒಂದಕ್ಕಿಂತ ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ. ಅಪ್ಪಟ ಮಾನವೀಯ ಚಟುವಟಿಕೆಯಾದ್ದರಿಂದಲೇ ಬದುಕಿನ ಎಲ್ಲ ರೋಮಾಂಚನಗಳೂ ಅದರಲ್ಲಿವೆ.

ಜಗತ್ತಿನ ಎಲ್ಲ ಭಾಷೆಯ ಕತೆಗಾರರೂ ಕತೆ ಬರೆಯುವಲ್ಲಿ ಎರಡು ವಿಧಾನವನ್ನು ಬಳಸುತ್ತಾರೆ. ಒಂದು ಈಗಾಗಲೇ ತಮಗೆ ಕಂಡು, ಕೇಳಿ ಗೊತ್ತಿರುವ ಕತೆಯನ್ನು ಬರೆಯುವುದು. ಮತ್ತೊಂದು ತಮ್ಮದೇ ಎಳೆ, ರೂಪಕ, ಪ್ರತಿಮೆಯನ್ನು ಇಟ್ಟುಕೊಂಡು ಕತೆಯನ್ನೇ ಬರೆಯುತ್ತಲೇ ಕತೆಯನ್ನು ಹುಡುಕುವುದು. ಬರಹಗಾರನಿಗೆ ಇವೆಲ್ಲವೂ ಕಡುಕಷ್ಟದ ಕೆಲಸಗಳೇ. ಎರಡರಲ್ಲೂ ಬರವಣಿಗೆ ಸವಾಲಿನಿಂದ ಕೂಡಿರುತ್ತದೆ. ತನ್ನೊಳಗಿನ ಜೀವಸೆಲೆಗಳನ್ನು ತನ್ನ ಕತೆಗಳಲ್ಲೂ ಮೂಡಿಸಬೇಕಾದ ಕೆಲಸವೇ ಲೇಖಕನ ರಕ್ತಬಸಿಯುವಂಥದ್ದು. ಅಲ್ಲಿ ಆಲಸ್ಯ ಸಲ್ಲದು. ಬರಹಗಾರನ ಚಣಮಾತ್ರದ ಮೈಮರೆಯುವಿಕೆ ಬರವಣಿಗೆಯ ಜೀವದ್ರವ್ಯವನ್ನೇ ಕಸಿದುಕೊಳ್ಳಬಹುದು. ಆದ್ದರಿಂದಲೇ ಕತೆಯೂ ಸೇರಿದಂತೆ ಎಲ್ಲ ಬರವಣಿಗೆಗಳೂ ಆ ಕ್ಷಣದ ಸ್ಫೂರ್ತಿಯನ್ನು, ವಾತಾವರಣವನ್ನು ಅವಲಂಬಿಸಿರುತ್ತವೆ. ಇದನ್ನು ಯಾವ ವಿಶ್ವವಿದ್ಯಾಲಯದ ಪಠ್ಯಕ್ರಮವೂ ಕಲಿಸಲು ಸಾಧ್ಯವಿಲ್ಲ. ಅದನ್ನು ಹುಡುಕಿಕೊಳ್ಳಬೇಕಾದ ಕರ್ಮ, ಸುಖ ಕತೆಗಾರರದು ಮಾತ್ರ ಆಗಿರುತ್ತದೆ.

ಈ ಬಾರಿಯ ‘ಮಯೂರ’ದಲ್ಲಿ ಬದುಕಿನ ಹಲವು ಕಥನದ ಕ್ಷಣಗಳನ್ನು ಪ್ರತಿಬಿಂಬಿಸುವ ಕತೆಗಳನ್ನು ಕೊಡಲು ಪ್ರಯತ್ನಿಸಲಾಗಿದೆ.

**ಸಂದೀಪ ನಾಯಕ**